ನಿಮ್ಮೊಡನೆ

# ನಾವು ಆಡುವ ಮಾತು..

ಬಾಯಿಂದ ಮಾತು ಹೊರಡುವಾಗ ವ್ಯಕ್ತಿಯ ಅಭಿವ್ಯಕ್ತಿ ವಿಶೇಷಗಳಿಗೆ ಅನುಗುಣವಾಗಿಯೂ ಅರ್ಥ ವ್ಯತ್ಯಾಸವಾಗುತ್ತದೆ. ಮಾತಿನ ನೇರ ಪರಿಣಾಮ ಕೇಳುಗರ ಗ್ರಹಿಕೆಯನ್ನು ಅವಲಂಬಿಸಿರುತ್ತದೆ. ಇದೆಲ್ಲವನ್ನು ಧ್ವನಿ ವಿಶೇಷವಾಗಿ ವ್ಯಾಖ್ಯಾನಿಸುವ ಅಂತರ್‌ಶಿಸ್ತೀಯ ಶಾಸ್ತ್ರವೂ ಬೆಳೆದು ಬಂದಿದೆ. ಆದರೆ ಬಳಕೆಯಲ್ಲಿ ಮಾತು ಸಂವಹನ ಸಾಧನ ಮಾತ್ರ. ಹೇಳಬೇಕೆಂದಿರುವುದನ್ನು ಉದ್ದೇಶಿತ ವ್ಯಕ್ತಿ ಇಲ್ಲವೇ ಸಮೂಹಕ್ಕೆ ತಲುಪಿಸುವುದಷ್ಟೆ ಅದರ ಕೆಲಸ. ಇದು ಸಾಮಾಜಿಕವಾಗಿ ಶಿಷ್ಟವಾಗಿರಬೇಕು. ಆದಷ್ಟೂ ಸೌಮ್ಯವಾಗಿರಬೇಕು ಎಂಬುದೊಂದು ಆದರ್ಶ.




ಸಂವಹನ ಮಾಧ್ಯಮವಾಗಿ ರೂಪುಗೊಂಡಿರುವ ಭಾಷೆ ಮನುಕುಲ ಸಾಧಿಸಿಕೊಂಡ ಅತ್ಯುನ್ನತ ಆವಿಷ್ಕಾರ. ಮೊದಲು ಪ್ರಾದೇಶಿಕ ಮಿತಿಯೊಳಗೆ ಬಳಕೆಗೆ ಬಂದು ಮಾತು ಕಾಲಾನಂತರ ಸ್ಥಳ ವೈವಿಧ್ಯಗಳಿಗೆ ಅನುಗುಣವಾಗಿ ಸಾವಿರಾರು ಭಾಷೆಗಳಾಗಿ ನಾಗರಿಕತೆಯನ್ನು ಬೆಳೆಸಿದ್ದು ಚರಿತ್ರೆಯ ವಿಸ್ಮಯಕಾರಕ ವಿದ್ಯಮಾನ. ಪ್ರಾರಂಭದಲ್ಲಿ ಮೌಖಿಕವಾಗಿದ್ದ ಮಾತು ಲಿಪಿಯ ಅವಲಂಬನೆಯಲ್ಲಿ ಗ್ರಂಥಸ್ಥ ರೂಪವನ್ನೂ ಪಡೆಯಿತು. ಮಾತು ಸಂವಹನ ಮಾಧ್ಯಮವಾಗಷ್ಟೇ ಉಳಿಯದೆ ಇತಿಹಾಸದ ದಾಖಲೆಗೆ ಬಳಕೆಯಾಯಿತು. ಕಾವ್ಯ, ಶಾಸ್ತ್ರ, ಪುರಾಣಗಳೇ ಮೊದಲಾದ ಬರಹಗಳಿಗೆ ವಾಹಕವಾಯಿತು. ಜಗತ್ತಿನ ಎಲ್ಲ ಕಡೆ ಹೀಗೆ ಮೌಖಿಕವೂ ಗ್ರಂಥಸ್ಥವೂ ಆದ ಸಾಹಿತ್ಯ ಸಮೃದ್ಧಿಗೆ ಭಾಷೆಯ ಸಂವಹನ ಸಾಮರ್ಥ್ಯವೇ ಆಧಾರ. ಅದು ನಾಗರಿಕತೆಯ ಶ್ರೇಷ್ಠ ಶೋಧ.

ಒಂದೂವರೆ ಸಾವಿರ ವರ್ಷಗಳಿಗೂ ಹಿಂದಿನ ಪ್ರಾಚೀನತೆಯ ಇತಿಹಾಸ ಇರುವ ಕನ್ನಡ ಭಾಷೆ, ಸಾಹಿತ್ಯದಲ್ಲಿ ಮಾತಿನ ಬಳಕೆಯ ಕುರಿತಾಗಿ ಅಲ್ಲಲ್ಲಿ ಮಿಂಚಿನಂತಹ ನುಡಿಕಿಡಿಗಳು ಹೊರಹೊಮ್ಮಿವೆ. ಹನ್ನೆರಡನೆಯ ಶತಮಾನದಷ್ಟು ಹಿಂದೆಯೇ ಮಾತು ಹೇಗಿದ್ದರೆ ಸೊಗಸು ಎಂಬುದನ್ನು ಸರಳವಾಗಿ ತಿಳಿಸುವ ಪ್ರಯತ್ನಗಳು ನಡೆದಿದ್ದವು. ನುಡಿದರೆ ಮುತ್ತಿನ ಹಾರದಂತಿರಬೇಕು, ಅದು ಸ್ಫಟಿಕದ ಶಲಾಕೆಯಂತಿರಬೇಕು. ಅದು ದೇವರು ಮೆಚ್ಚಿ ಅಹುದು ಅಹುದು ಎನ್ನುವಂತಿರಬೇಕು– ಎಂದು ಹೇಳಿದ್ದ ಬಸವಣ್ಣ ಮಾತಿನ ಸಾರ್ಥಕತೆಯನ್ನೂ ಈ ಸಂದರ್ಭದಲ್ಲಿಯೇ ಹೇಳಿದ್ದರು. ನುಡಿದಂತೆ ನಡೆಯದಿದ್ದರೆ ದೇವರು ಮೆಚ್ಚುವುದಿಲ್ಲ ಎಂದಿದ್ದರು. ಮಾತಿಗೂ ಕೃತಿಗೂ ಅಂತರ ಇರಬಾರದು ಎಂಬ ಆಶಯ ಕನ್ನಡ ನಾಡಿನ ಪರಂಪರೆ. ಹಿಂದಿನ ಜನ ಅದರಂತೆ ನಡೆದುಕೊಳ್ಳಲು ಪ್ರಯತ್ನವನ್ನಂತೂ ಪಡುತ್ತಿದ್ದರು.

ಭಾಷೆಯ ಬಳಕೆಯನ್ನು ಭಾವೋಪಯೋಗಿ ಮತ್ತು ಲೋಕೋಪಯೋಗಿ ನೆಲೆಯಲ್ಲಿ ವಿಶ್ಲೇಷಿಸಿದ್ದು ಕಾವ್ಯಮೀಮಾಂಸೆಯ ದೃಷ್ಟಿ. ಅದು ಸಾಹಿತ್ಯದ ಪರಿಭಾಷೆ. ಆಡುವ ಮಾತಿಗೆ ಸರಳವಾಗಿ ಸೂಚಿಸುವ ಅರ್ಥ ಒಂದಿರುತ್ತದೆ. ಅದೇ ಪದಗಳನ್ನು ಬಳಸಿ ಸರಳ ಅರ್ಥಕ್ಕಿಂತ ಭಿನ್ನವಾದ ಹೊಳವನ್ನು ಹೊರಡಿಸುವಂಥ ಧ್ವನಿಪೂರ್ಣ ರಚನೆಗಳು ಭಾಷೆಯ ವಿಶೇಷ. ಬಾಯಿಂದ ಮಾತು ಹೊರಡುವಾಗ ವ್ಯಕ್ತಿಯ ಅಭಿವ್ಯಕ್ತಿ ವಿಶೇಷಗಳಿಗೆ ಅನುಗುಣವಾಗಿಯೂ ಅರ್ಥ ವ್ಯತ್ಯಾಸವಾಗುತ್ತದೆ. ಮಾತಿನ ನೇರ ಪರಿಣಾಮ ಕೇಳುಗರ ಗ್ರಹಿಕೆಯನ್ನು ಅವಲಂಬಿಸಿರುತ್ತದೆ. ಇದೆಲ್ಲವನ್ನು ಧ್ವನಿ ವಿಶೇಷವಾಗಿ ವ್ಯಾಖ್ಯಾನಿಸುವ ಅಂತರ್‌ಶಿಸ್ತೀಯ ಶಾಸ್ತ್ರವೂ ಬೆಳೆದು ಬಂದಿದೆ. ಆದರೆ ಬಳಕೆಯಲ್ಲಿ ಮಾತು ಸಂವಹನ ಸಾಧನ ಮಾತ್ರ. ಹೇಳಬೇಕೆಂದಿರುವುದನ್ನು ಉದ್ದೇಶಿತ ವ್ಯಕ್ತಿ ಇಲ್ಲವೇ ಸಮೂಹಕ್ಕೆ ತಲುಪಿಸುವುದಷ್ಟೆ ಅದರ ಕೆಲಸ. ಇದು ಸಾಮಾಜಿಕವಾಗಿ ಶಿಷ್ಟವಾಗಿರಬೇಕು. ಆದಷ್ಟೂ ಸೌಮ್ಯವಾಗಿರಬೇಕು ಎಂಬುದೊಂದು ಆದರ್ಶ. ಅದರ ಪಾಲನೆ ಕುರಿತಾಗಿ ಅನೇಕ ಅಲಿಖಿತ ನಿಯಮಗಳು ಜನಬಳಕೆಯಲ್ಲಿ ಉಳಿದುಬಂದಿವೆ.

ಆಡುವ ಮಾತು ಹೇಗಾದರೂ ಇರಲಿ, ಬರವಣಿಗೆಯಲ್ಲಿ ಒಂದು ಶಿಸ್ತು ಇರಬೇಕು ಎಂಬ ನಿಯಮ ಎಲ್ಲ ಭಾಷಾ ಪ್ರದೇಶಗಳಲ್ಲೂ ಜಾರಿಯಲ್ಲಿದೆ. ಲಿಪಿಯುಳ್ಳ ಭಾಷೆಗಳಿಗೆ ಅವುಗಳ ಬಳಕೆಯಲ್ಲಿ ಒಂದು ಶಿಸ್ತನ್ನು ಗುರುತಿಸುವ ವ್ಯಾಕರಣ ನಿಯಮಗಳಿವೆ. ಮಾತು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಅಭಿಪ್ರಾಯ ಮಂಡನೆಯ ಸಾಧನ. ಅದು ಪರಿಣಾಮಕಾರಿಯಾಗಿದ್ದಷ್ಟೂ ಜನರ ಮನಸ್ಸಿನಲ್ಲಿ ಉಳಿಯುತ್ತದೆ. ಆದ್ದರಿಂದಲೇ ಉಗ್ರ ಭಾಷಣಗಳು ಜನಪ್ರಿಯವಾಗುತ್ತವೆ. ಜನರನ್ನು ರಂಜಿಸುತ್ತವೆ. ವಿವಾದಗಳನ್ನು ಸೃಷ್ಟಿಸಬಲ್ಲ ಸಾಮರ್ಥ್ಯ ಅವಕ್ಕಿದೆ. ಅವು ಜನರನ್ನು ಪ್ರಚೋದಿಸಬಲ್ಲವು. ಅವರನ್ನು ಕಾರ್ಯೋನ್ಮುಖರಾಗುವಂತೆ ಉತ್ತೇಜಿಸಬಲ್ಲವು. ಕೇಳಿಸಿಕೊಂಡವರು ಸ್ವಂತವಾಗಿ ಯೋಚನೆಯನ್ನು ಕೂಡ ಮಾಡದೆ ಅದನ್ನು ಬಲವಾಗಿ ನಂಬಿ ಪ್ರತಿಕ್ರಿಯಿಸುವಷ್ಟು ಉತ್ತೇಜನಕಾರಿ. ಆದರೆ ಪ್ರಜಾಸತ್ತೆಯ ವ್ಯವಸ್ಥೆಯಲ್ಲಿ ವಾದಕ್ಕೆ ಪ್ರತಿವಾದದ ಅವಕಾಶವಿದೆ. ಚರ್ಚೆ ಸಂವಾದಗಳಿಗೆ ಆಸ್ಪದವಿದೆ. ಯಾವುದೇ ವಿಷಯ ಕುರಿತ ಅಭಿಪ್ರಾಯವಿದ್ದರೂ ಅದನ್ನು ಚರ್ಚೆ ನಡೆಸಿ ಇತ್ಯರ್ಥಪಡಿಸಿಕೊಳ್ಳುವುದು ಈ ವ್ಯವಸ್ಥೆಯ ಪ್ರಧಾನ ಅಂಶ. ಆದ್ದರಿಂದ ಎಷ್ಟೋ ಸಂಘರ್ಷಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಸಂವಾದ ಮಾರ್ಗ ಸುವರ್ಣಪಥ.

ಈಚಿನ ವರ್ಷಗಳಲ್ಲಿ ಮಾತಿನ ಮೌಖಿಕ ಸ್ವರೂಪದಲ್ಲಿ ಮಾತ್ರವಲ್ಲ ಲಿಖಿತ ರೂಪದಲ್ಲಿಯೂ ಹೆಚ್ಚಿನ ಸ್ವಾತಂತ್ರ್ಯವನ್ನು ವಹಿಸುವ ಪ್ರವೃತ್ತಿ ಕಂಡು ಬಂದಿದೆ. ಅದು ಸಾಮಾಜಿಕವಾಗಿ ಒಪ್ಪಿಕೊಂಡು ಬಂದ ನಿಯಮಗಳನ್ನು ಮೀರುವಂತೆಯೂ ಕಂಡುಬರುತ್ತದೆ. ಇದು ವಿವಿಧ ರಂಗಗಳಲ್ಲಿ ತಲ್ಲಣ ಉಂಟು ಮಾಡಬಲ್ಲದು. ಮಾತು ಹದ ತಪ್ಪಬಾರದು, ಅದು ಅರಿವಿನ ಬೆಳಕನ್ನು ಮೂಡಿಸುವ ಮಾಧ್ಯಮ. ಅದರ ಬಳಕೆಯಲ್ಲಿ ಎಚ್ಚರ ಇರುವುದು ಎಲ್ಲ ಕಾಲಕ್ಕೂ ಪ್ರಸ್ತುತವಾದ ನಡವಳಿಕೆ.

■ ಲಕ್ಷ್ಮಣ ಕೊಡಸೆ